ಪ್ರಬಂಧಕ್ಕೆ ಪಿಎಚ್.ಡಿ ಪಡೆದಿದ್ದಾರೆ. ಕರ್ನಾಟಕದಲ್ಲಿ ಕನ್ನಡ ಕಲಿತು ನಮ್ಮ ಅನೇಕ ಮುಖ್ಯ ಬರಹಗಾರರ, ಕವಿಗಳ ಕವನಗಳನ್ನು ಕನ್ನಡದಿಂದ ಹಿಂದಿಗೆ ಅನುವಾದಿಸಿದ್ದಾರೆ. ಹಾಗೆಯೇ ಹಿಂದಿಯಿಂದಲೂ ಮುಖ್ಯ ಕವಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಕನ್ನಡದಿಂದ ಹಿಂದಿಗೆ ಅವರು ಅನುವಾದಿಸಿದ ದ.ರಾ. ಬೇಂದ್ರೆ, ಗೋಪಾಲಕೃಷ್ಣ ಅಡಿಗ ಮೊದಲಾದ ಕೆಲವು ಕವಿಗಳ ದಟ್ಟ ಓದಿನ ಛಾಯೆ ಅವರ ಕೆಲವು ಕವನಗಳ ರೂಪಕಗಳ ಮೇಲೆ ಬಿದ್ದಂತೆ ಭಾಸವಾಗುತ್ತದೆ.

'ನಾನು' ಭಾವ ಅವರ ಅನೇಕ ಕವನಗಳಲ್ಲಿವೆ. ಆದರೆ ಆ 'ನಾನು' ಹೋಗಿ ನಿನ್ನನ್ನು ಮಾತ್ರ ತೋರಿಸಬೇಕು; 'ನೀನು' ಸರ್ವತ್ರ ಕಾಣಬೇಕು ಎಂಬ ಆಶಯ 'ಪ್ರಾರ್ಥನೆ' ಕವನಗಳಲ್ಲಿ ಹೀಗಿದೆ: 'ತೋರಲು ನನ್ನ ನಿನ್ನ ಅವಿರತ ಅನುಬಂಧವನ್ನು/ ತೊಲಗಿಸಲು ನಾನೆಂಬ ನೆರಳನ್ನು'. 'ನಮ್ಮಿಬ್ಬರ' ನಡುವಿನ ದೂರವನ್ನು ತೊಲಗಿಸು ಎಂದು ಕವಿ–ನಿರೂಪಕ ಬೇಡಿಕೊಳ್ಳುತ್ತಾನೆ. ಏಕಾಕಾರವಾಗಲಿ ನಾನು ನಿನ್ನಲ್ಲಿ ಎಂಬುದು ಬಯಕೆ. ಆದರೆ ಅದುವೂ ಸಾಧಿತವಾಗಬೇಕಾದುದು ಅವನಿಚ್ಛೆಯಿಂದ.

ಒಬ್ಬ ಪ್ರಮುಖ ಕವಿಗೂ ಅಷ್ಟು ಮುಖ್ಯವಲ್ಲದ ಕವಿಗೂ ಇರುವ ವ್ಯತ್ಯಾಸವೆಂದರೆ ಅವರಲ್ಲಿರುವ ತಾತ್ವಿಕ ಗ್ರಹಿಕೆ. ಪ್ರಮುಖ ಕವಿಗೆ ತತ್ವಜ್ಞಾನದಲ್ಲಿ ಆಸಕ್ತಿ ಇರುತ್ತದೆ. ಅವನ ರೂಪಕಗಳಲ್ಲೂ ತಾತ್ವಿಕತೆ ಸೇರಿಕೊಳ್ಳುತ್ತದೆ. 'ಭೆಟ್ಟಿಯಾಗಬೇಕು ಅವನನ್ನು' ಎಂಬ ಕವನ ಇದಕ್ಕೊಂದು ಉದಾಹರಣೆ. 'ನಾನು ಅವನ ಭೆಟ್ಟಿಯಾಗಬೇಕು/ ಸಾಗಬೇಕು ಹಾದಿ ಕೊನೆತನಕ / ಅವನು ಸಿಕ್ಕರೆ ಸಿಗಲಿ' ಎಂಬ ಆಶಯ. ಆದರೆ ಸಿಗಲೇಬೇಕೆಂಬ ಹಟವಿಲ್ಲವಾದ್ದರಿಂದ 'ಸಿಗದೆ ಹೋದರೂ ಕೂಡ' ಎಂದು ಕವನ ಕೊನೆಯಾಗುತ್ತದೆ. ದ.ರಾ. ಬೇಂದ್ರೆಯವರು ಒಂದು ಕವನದಲ್ಲಿ 'ನಿನ್ನನ್ನು ಕಾಣಲೇಬೇಕೆಂಬ ಹಠ ನನಗೆ ಯಾಕೆ?' ಎನ್ನುತ್ತಾರೆ. ಅವನಿರುವಿಕೆ ತಿಳಿವಿನಲ್ಲಿರುವಾಗ ನೀನು ಕಾಣಲೇಬೇಕೆಂದು ಹಟ ಮಾಡಿ ನಿನ್ನನ್ನು ಕಳೆದುಕೊಳ್ಳಲು ತಾನು ತಯಾರಿಲ್ಲ ಎಂದು ಬೇಂದ್ರೆ ಹೇಳುತ್ತಾರೆ. ಮನಸ್ಸಿನ ಕಣ್ಣಲ್ಲಿ ಕಂಡು ಅನುಭವಿಸಿದ್ದು, ವಾಸ್ತವ ಕಣ್ಣುಗಳಲ್ಲಿ ಕಾಣುವುದಕ್ಕೆ ಸಮಾನವಲ್ಲ ಯಾಕೆ? ಎಂಬ ಪ್ರಶ್ನೆಯನ್ನದು ಎತ್ತುತ್ತದೆ. ಯಾಕೆಂದರೆ 'ನಿಜವ ಕಂಡವರಿಲ್ಲ / ನಿಜ ಕಾಣುವಂತಿಲ್ಲ' ಎಂಬುದೂ ಕವಿಯ ಚಿತ್ತಜ್ಞಾನಕ್ಕೆ ಅರಿತಿದೆ. ಹೀಗೆ ಕವಿ ತತ್ವಜ್ಞಾನವನ್ನು ಒಳಗೊಳ್ಳುವುದಕ್ಕೆ ಹಲವು ಕ್ರಮಗಳಿದ್ದಾವೆ. (ಚಾಂಗದೇವ ಪಾಸಷ್ಟಿಯಲ್ಲಿ ಬೇಂದ್ರೆಯವರ ಅನುವಾದ, 'ನಿನ್ನ ನಾನು ಕಾಣುವದೆ ಎಂದು ನೆನೆ–/ ದಾಗ ಕಂಡೆ ನನ್ನ/ ದರ್ಶನಕ್ಕೆ ಹಠ ಮಾಡಿ ನಾನು ಕಳ–/ ಕೊಳ್ಳಬೇಕೆ ನಿನ್ನ?')

ಹೃದಯವನ್ನು 'ಹರಿಯಲು ಬಿಡು' ಎಂದು ಅದೇ ಹೆಸರಿನ ಕವನ ಕೇಳಿಕೊಳ್ಳುತ್ತದೆ. ಕಾವ್ಯದಲ್ಲಿ 'ಪ್ರತಿಭೆ ನಿಜವಾಗಿ ಒಂದು ರೀತಿಯ ದೃಷ್ಟಿ. ಅದು ಬುದ್ಧಿಯ ಕಣ್ಣಲ್ಲ ಹೃದಯದ ಕಣ್ಣು. ಕವಿಯ ಈ ಒಳಗಣ್ಣು ತೆರೆದಾಗ ವಿಶ್ವದ ಹೃದಯವೇ ಅವನಿಗೆ ತೆರೆಯುತ್ತದೆ' ಎಂಬ ಮಾತನ್ನು 'ಧ್ವನ್ಯಾಲೋಕ ಲೋಚನ' ಹೇಳುತ್ತದೆ. ಪರೋಕ್ಷವಾಗಿ ಹರಿಯಲು ಬಿಡು ಕವನ, ಕಾವ್ಯದ ಈ ಶಕ್ತಿಯನ್ನು ನಂಬುತ್ತದೆ. ಅಭಿನವ ಗುಪ್ತ ಪರಮೇಶ್ವರನ 'ಪರಾಪ್ರತಿಭೆ'ಯನ್ನೂ ಕವಿಯ 'ಪ್ರತಿಭೆ'ಯನ್ನೂ ಸಮಾನ ವಿಶೇಷಣಗಳಿಂದ ವರ್ಣಿಸುತ್ತಾನೆ. ಪರಮೇಶ್ವರನ ಪ್ರತಿಭೆ ಉನ್ಮೀಲನ ಗೊಂಡಾಗ ಇಡೀ ವಿಶ್ವ ಉನ್ಮೀಲನಗೊಳ್ಳುತ್ತದೆ. ಕವಿಹೃದಯದಲ್ಲಿ ಪ್ರತಿಭೆ ಉದ್ಬೋದಗೊಂಡಾಗ ಹೊಸತೊಂದು ವಿಶ್ವವು ಅದಕ್ಕೆ ಗೋಚರವಾಗುತ್ತದೆ ಎಂದು ಅದನ್ನು ತೀ.ನಂ.ಶ್ರೀ. ವಿವರಿಸಿದ್ದಾರೆ. 'ಹರಿಯಲು ಬಿಡು' ಕವನದಲ್ಲಿ:

**ಬಹುಶಃ**
**ಹೃದಯ ತುಂಬಿರಲಿಲ್ಲ**
**ನೀನು ತಪ್ಪು ತಿಳಿದಿದ್ದೆ**
**ಅಹಮು, ಅಜ್ಞಾನಗಳಲ್ಲಿ**
**ನೀನಂದುಕೊಂಡಿದ್ದೆ ಅದು ತುಂಬಿಸಿಕೊಂಡಿದೆ ಅಂತ**
**ಹಾಗಾಗಿದ್ದರೆ**
**ಅದರಲ್ಲಿ ಪ್ರೀತಿ ತುಂಬಿದ್ದರೆ**
**ಅದು ಉಕ್ಕುತ್ತಿತ್ತು**
**ಹರಿಯುತ್ತಿತ್ತು ತುಂಬಿ**

ಮಾತ್ರವಲ್ಲ, ಅದು ತನ್ನ ಹಾದಿಗಳನ್ನೂ ಗುರಿಗಳನ್ನು ಹುಡುಕಿಕೊಳ್ಳುತ್ತಿತ್ತು. ಬಹುಶಃ ಅಲ್ಲಿದ್ದ ಕೆಲವು ಪ್ರೇಮಬಿಂದುಗಳನ್ನೇ ಪ್ರೀತಿ ತುಂಬಿದೆ ಎಂದು ತಪ್ಪು ತಿಳಿದದ್ದರಿಂದ ಅನೇಕ ಸಮಸ್ಯೆಗಳಾಗಿವೆ. ಅಂತಿಮವಾಗಿ 'ಹರಿಯಲಿ ಹೃದಯ/ ಆ ಮಹತ್ತಿನ